1ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು 946-2025**

**ಸಿ.ಡಬ್ಲ್ಯು -1, ಪಿ.ಡಬ್ಲ್ಯು-1**

**ಸಾಕ್ಷಿದಾರರ ಹೆಸರು** : ಭಾಗ್ಯಲಕ್ಷ್ಮೀ
ಗಂಡನ **ಹೆಸರು** : ರಾಜಶೇಖರ್
**ವಯಸ್ಸು** : 34 ವರ್ಷ
**ಉದ್ಯೋಗ** : ಅಬಕಾರಿ ನಿರೀಕ್ಷಕರು, ಸಾಗರ ಉಪ ವಿಭಾಗ, ಸಾಗರ
**ವಾಸ** : ಸಾಗರ

**ಪ್ರಮಾಣೀಕರಿಸಿದ ದಿನಾಂಕ :05.01.2026.**

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು ಡಿಸೆಂಬರ್ 2023 ರಿಂದ ಇಲ್ಲಿಯವರೆಗೂ ಸಾಗರದ ಅಬಕಾರಿ ಉಪ ವಿಭಾಗದಲ್ಲಿ ಅಬಕಾರಿ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ:10.02.2025 ರಂದು ನಾನು ಚಾಸ 2 ರಿಂದ 4 ರವರೊಂದಿಗೆ ಕಚೇರಿಯನ್ನು ಮಧ್ಯಾಹ್ನ 1 ಗಂಟೆಯ ಸಮಯದಲ್ಲಿ ಯಲಕುಂದ್ಲಿ ಗ್ರಾಮದ ಬಳಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ತಟ್ಟಿ ಗುಂಡಿ ಗ್ರಾಮದ ಕನ್ನಪ್ಪ ಬಿನ್ ಬೊಮ್ಮಪ್ಪ ಎಂಬುವವರು ತಮ್ಮ ವಾಸದ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ದಾಸ್ತಾನು ಹಾಗೂ ಬೆಲ್ಲದ ಕೊಳೆಯ ದಾಸ್ತಾನನ್ನು ಸಂಗ್ರಹಿಸಿಟ್ಟಿರುತ್ತಾರೆಂಬ ಮಾಹಿತಿ ಬಂದಿದ್ದು, ನಾನು ಮಾಹಿತಿ ಬಂದ ಸ್ಥಳಕ್ಕೆ ಹೋಗುವಾಗ ಅದೇ ಗ್ರಾಮದ ಬಸ್ ನಿಲ್ದಾಣದ ಬಳಿ ನಿಂತಿದ್ದ ಇಬ್ಬರು ವ್ಯಕ್ತಿಗಳಿಗೆ ಮಾಹಿತಿಯ ವಿಷಯವನ್ನು ತಿಳಿಸಿ ಪಂಚರಾಗಲು ಸಹಕರಿಸುವಂತೆ ಕೇಳಿಕೊಂಡಾಗ ಅವರು ನಿರಾಕರಿಸಿರುತ್ತಾರೆ. ಪಂಚರು ಯಾರೂ ಸಿಗದ ಕಾರಣ ಸಿಬ್ಬಂದಿಗಳನ್ನೇ ಪಂಚರನ್ನಾಗಿ ಮಾಡಿಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋದಾಗ ಮನೆಯ ಮುಂದೆ ಒಬ್ಬ ವ್ಯಕ್ತಿ ನಿಂತಿದ್ದ ಆತನ ಹೆಸರನ್ನು ಕೇಳಲಾಗಿ ಆತ ತನ್ನ ಹೆಸರು ಟೋಕಪ್ಪ ಬಿನ್ ಬೀರಪ್ಪ ಎಂದು ತಿಳಿಸಿದ. ಆ ವ್ಯಕ್ತಿಗೆ ನಾವು ನಮಗೆ ಬಂದ ಮಾಹಿತಿಯ ವಿಷಯವನ್ನು ತಿಳಿಸಿ ಮನೆಯನ್ನು ಶೋಧಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ಅನ್ನು ಪಡೆಯಲು ಸಮಯ ಇಲ್ಲದ್ದರಿಂದ ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿರುತ್ತೇನೆ.

3. ನಂತರ ಮನೆಯ ಒಳಗೆ ಶೋಧಿಸಿದಾಗ ಮನಗೆ ಹೊಂದಿಕೊಂಡಿರುವ ಹಿಂಬದಿಯ ಬಚ್ಚಲು ಮನೆಯಲ್ಲಿ ಪ್ಲಾಸ್ಟಿಕ್ ಚೀಲಗಳಿಂದ ಏನನ್ನೋ ಮುಚ್ಚಿಟ್ಟಿರುವುದು ಕಂಡು ಬಂತು. ನಂತರ ಚೀಲಗಳನ್ನು ಸರಿಸಿ ನೋಡಿದಾಗ ಒಂದು ಪ್ಲಾಸ್ಟಿಕ್ ಕ್ಯಾನು ಮತ್ತು 3 ಕೊಡಪಾನಗಳು ಇರುವುದು ಕಂಡು ಬಂತು. ಅವುಗಳನ್ನು ಪರಿಶೀಲಿಸಿದಾಗ ಅವುಗಳು ಗಾಟು ವಾಸನೆಯಿಂದ ಕೂಡಿದ್ದವು. 5 ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನನ್ನು ಪರಿಶೀಲಿಸಿದಾಗ ಅದರಲ್ಲಿ 4 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂತು. ಹಳದಿ, ಹಸಿರು ಮತ್ತು ತಿಳಿ ಗುಲಾಬಿ ಬಣ್ಣದ ಕೊಡಪಾನಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಸಲು ಇರುವ ಬೆಲ್ಲದ ಕೊಳೆ ಇರುವುದು ಕಂಡು ಬಂತು. ಅವುಗಳನ್ನು ಇಲಾಖಾ ವಶಕ್ಕೆ ಪಡೆದು ದೊರೆತ ಕೊಡಪಾನಗಳಿಂದ 1 ಲೀಟರ್ ನಷ್ಟು ಬೆಲ್ಲದ ಕೊಳೆಯನ್ನು ಹಾಗೂ ಕಳ್ಳಭಟ್ಟಿ ಸಾರಾಯಿಯಿಂದ 500 ಎಂ ಎಲ್ ನಷ್ಟು ಮಾದರಿಗಳನ್ನು ತೆಗೆಯಲಾಯಿತು. ನಂತರ ಪಂಚನಾಮೆಯ ಕ್ರಮವನ್ನು ಮಧ್ಯಾಹ್ನ 1.30 ರಿಂದ 2.30 ರವರೆಗೆ ಜರುಗಿಸಿ, 2 ನೇ ಆರೋಪಿಗೆ ಸ್ಥಳದಲ್ಲಿಯೇ ನೋಟೀಸನ್ನು ನೀಡಿ ವಿಚಾರಣೆಗೆ ಹಾಜರಾಗುವಂತೆ ತಿಳಿಸಿರುತ್ತೇನೆ. 1 ನೇ ಆರೋಪಿ ತಲೆಮರೆಸಿಕೊಂಡಿದ್ದ. ನಂತರ ಕಚೇರಿಗೆ ಹಿಂದಿರುಗಿ ಆರೋಪಿತರ ವಿರುದ್ಧ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

4. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಶೋಧನಾ ಸಮುಚಿತ ಆಧಾರ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಶೋಧನಾ ಸಮುಚಿತ ಆಧಾರವನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತುಗಳ ಪಟ್ಟಿಯನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ವತ್ತುಗಳ ಪಟ್ಟಿಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು

ನಿಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಮೊಹರು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಾದರಿ ಮೊಹರನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಬಕಾರಿ ಪ್ರಾಧಿಕಾರದವರಿಗೆ ಕಳುಹಿಸಿದ ಮುದ್ದೆ ಮಾಲಿನ ಪಟ್ಟಿಯನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮುದ್ದೆಮಾಲಿನ ಪಟ್ಟಿಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚರಿಗೆ ನೀಡಿದ ನೋಟೀಸನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚರಿಗೆ ನೀಡಿದ ನೋಟೀಸ್ ಅನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಛಾಯಾಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಛಾಯಾಚಿತ್ರಗಳನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು. ಸಾಕ್ಷಿಯು ಪೆನ್ ಡ್ರೈವ್ ಅನ್ನು ನೋಡಿ ಗುರುತಿಸಿದ್ದು, ಪೆನ್ ಡ್ರೈವ್ ಅನ್ನು ನಿಪಿ 10 ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಪ್ರಮಾಣ ಪತ್ರವನ್ನು ನಿಪಿ 11 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವ ಪಿರ್ಯಾದನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ವ ಪಿರ್ಯಾದನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿಗಾಗಿ ಕಾಯ್ದಿರಿಸಿದ 2 ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಆ ದಿನ ನಾವು ದಾಳಿ ಮಾಡಿದಾಗ ದೊರೆತ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ ಪರ ವಕೀಲರು 2ನೇ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ನಿವೇದನಾ ಪತ್ರವನ್ನು ಸಲ್ಲಿಸಿರುತ್ತಾರೆ.)

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಜಿ.ಎಸ್.ಕೆ. ವಕೀಲರಿಂದ</u>

1. ಕಚೇರಿಯಿಂದ ನಾವು 4 ಜನ ಗಸ್ತಿಗೆ ಹೋಗಿರುತ್ತೇವೆ. ಇಲಾಖಾ ವಾಹನವನ್ನು ಆ ದಿನ ಸಚಿನ್ ತಾಂಡೇಲೆ ಎಂಬುವವರು ಚಲಾಯಿಸುತ್ತಿದ್ದರು. ಚಾಲಕನನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಯಲಕುಂದ್ಲಿ ಗ್ರಾಮಕ್ಕೆ ಹೋಗುವಾಗ ಸಿಗುವ ಗ್ರಾಮಗಳಲ್ಲಿ ನಾವು ಗಸ್ತು ಕಾರ್ಯ ನಿರ್ವಹಿಸಿರುವುದಿಲ್ಲ. ನಾವು ಶಿರವಾಳ ಮಾರ್ಗವಾಗಿ ಯಲಕುಂದ್ಲಿಗೆ ಹೋಗಿರುತ್ತೇವೆ. ಮಾಸೂರು ಗ್ರಾಮದಲ್ಲಿ 3 ಸರ್ಕಲ್ ಗಳು ಇವೆ ಎಂದರೆ ಸರಿ. ಚಿಕ್ಕನಲ್ಲೂರು ಮಾರ್ಗವಾಗಿ ನಾವು ತಟ್ಟೆಗುಂಡಿ ಗ್ರಾಮಕ್ಕೆ ಹೋಗಿರುತ್ತೇವೆ. ಯಲಕುಂದ್ಲಿ ಗ್ರಾಮವು 500 ರಿಂದ 600 ಮನೆಗಳುಳ್ಳ ಗ್ರಾಮ ಎಂದರೆ ಸರಿ.

2. ಯಲಕುಂದ್ಲಿ ಗ್ರಾಮದಲ್ಲಿ 3 ರಿಂದ 4 ಬಸ್ ನಿಲ್ದಾಣಗಳು ಇವೆ ಎಂದರೆ ಸಾಕ್ಷಿಯು ಮುಖ್ಯವಾದ ಬಸ್ ನಿಲ್ದಾಣ ಒಂದೇ ಇರುತ್ತದೆ ಎಂದು ನುಡಿಯುತ್ತಾರೆ. ಮುಖ್ಯ ಬಸ್ ನಿಲ್ದಾಣದ ಅಕ್ಕಪಕ್ಕ ಅಂಗಡಿಗಳು, ಶಾಲೆ, ಹಾಲಿನ ಕೇಂದ್ರ, ಆರೋಗ್ಯ ಕೇಂದ್ರ ಇರುತ್ತವೆ ಎಂದರೆ ಸರಿ. ಗಸ್ತಿನ ಸಮಯದಲ್ಲಿ ಅಂಗಡಿಗಳನ್ನು ಪರಿಶೀಲಿಸಿರುವುದಿಲ್ಲ, ವಾಹನಗಳ ತಪಾಸಣೆ ಮಾಡಿರುವುದಿಲ್ಲ. ಮಾಹಿತಿ ಬಂದ ತಕ್ಷಣ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವುದಿಲ್ಲ. ಪಂಚರಾಗಲು ನಿರಾಕರಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಯಲಕುಂದ್ಲಿ ಗ್ರಾಮದ ಗ್ರಾಮಾಭಿವೃದ್ಧಿ ಅಧಿಕಾರಿಯನ್ನು ಪಂಚರಾಗಿ ಕರೆಯಲು ಸಮಯದ ಅಭಾವ ಇತ್ತು.

3. ಪಂಚರನ್ನು ಕರೆಯಲು ಸಮಾಯಾವಕಾಶ ಇರಲಿಲ್ಲ ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಯಲಕುಂದ್ಲಿ ಬಸ್ ನಿಲ್ದಾಣದ ಬಳಿ 10 ನಿಮಿಷ ಗಸ್ತು ನಿರ್ವಹಿಸಿರುತ್ತೇನೆ. ಬಸ್ ನಿಲ್ದಾಣದಿಂದ ಘಟನಾ ಸ್ಥಳಕ್ಕೆ ಹೋದಾಗ ಸಮಯ ಮಧ್ಯಾಹ್ನ 1 ಗಂಟೆ 10 ನಿಮಿಷವಾಗಿತ್ತು. ಯಲಕುಂದ್ಲಿ, ಶುಂಠಿಕೊಪ್ಪ, ತಟ್ಟೆಗುಂಡಿ ಗ್ರಾಮಗಳು ಬೇರೆ ಬೇರೆ ಗ್ರಾಮಗಳು ಎಂದರೆ ಸರಿ. ಯಲಕುಂದ್ಲಿ ಗ್ರಾಮದಿಂದ ತಟ್ಟೆಗುಂಡಿ ಗ್ರಾಮ 3 ಕಿ ಮೀ ಅಂತರದಲ್ಲಿರುತ್ತದೆ. ತಟ್ಟೆಗುಂಡಿ ಗ್ರಾಮದಲ್ಲಿ 100 ರಿಂದ 120 ಮನೆಗಳು ಇರುತ್ತವೆ ಎಂದರೆ ಸರಿ.

ತಟ್ಟೆಗುಂಡಿ ಗ್ರಾಮದ ಸ್ಥಳೀಯ ನಿವಾಸಿಗಳನ್ನು ಪಂಚರನ್ನಾಗಿ ನಾನು ಕರೆದಿರುವುದಿಲ್ಲ. ದಾಳಿ ಮಾಡಿದ ಮನೆಯ ಅಕ್ಕಪಕ್ಕ ಸಾಲುಗೇರಿ ಮನೆಗಳಿರುತ್ತವೆ. ಅಕ್ಕಪಕ್ಕದ ಮನೆಯವರನ್ನು ವಿಚಾರಣೆ ಮಾಡಲು ಅಲ್ಲಿ ಯಾರೂ ಇರಲಿಲ್ಲ. ಅಕ್ಕಪಕ್ಕದ ಮನೆಯಲ್ಲಿ ಜನರು ಇರಲಿಲ್ಲ ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ.

4. ದಾಳಿ ಮಾಡಿದ ಮನೆಯ ಪೂರ್ವ ದಿಕ್ಕಿನ ಕಡೆಗೆ ನಮ್ಮ ವಾಹನವನ್ನು ನಿಲ್ಲಿಸಿದ್ದೆವು. 2ನೇ ಆರೋಪಿಯನ್ನು ಹೊರತುಪಡಿಸಿ ದಾಳಿ ಮಾಡಿದ ಮನೆಯಲ್ಲಿ ಬೇರೆ ಯಾವುದೇ ಜನರು ಇರಲಿಲ್ಲ. 2ನೇ ಆರೋಪಿಗೆ ಶೋಧನೆ ಮಾಡಲು ಸಹಕರಿಸಿ ಎಂದು ನಾನೇ ಹೇಳಿದೆ. ಆ ವಿಷಯವನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ. ಚಾಸ 2 ಮತ್ತು 3 ನಮ್ಮ ಇಲಾಖೆಯ ಸಿಬ್ಬಂದಿಗಳು ಎಂದರೆ ಸರಿ. ಚಾಸ 2 ಮತ್ತು 3 ರವರು ಇಲಾಖೆಯ ಹಲವಾರು ಪ್ರಕರಣಗಳಲ್ಲಿ ಪಂಚರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಬಚ್ಚಲು ಮನೆ ವಾಸದ ಮನೆಯ ಪಶ್ಚಿಮ ದಿಕ್ಕಿಗೆ ಇತ್ತು. ಮನೆಯನ್ನು ಪ್ರವೇಶ ಮಾಡಿದ ನಂತರವೇ ಬಚ್ಚಲು ಮನೆಗೆ ಹೋದೆವು.

5. ಮನೆಯ ಒಳಗೆ ಪರಿಶೀಲನೆ ನಡೆಸಿದೆವು, ಏನೂ ಸಿಗಲಿಲ್ಲ. ಸದರಿ ಅಂಶವನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಶೋಧನಾ ಸಮುಚಿತ ಆಧಾರವನ್ನು ತಯಾರಿಸಿದಾಗ ಸಮಯ ಮಧ್ಯಾಹ್ನ 1.30 ಗಂಟೆ ಆಗಿತ್ತು. ಮದ್ಯದ ಮಾಲನ್ನು ಚಾಸ 4 ಮೊದಲು ನೋಡಿದರು. ಸದರಿ ಅಂಶವನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಪ್ಲಾಸ್ಟಿಕ್ ಚೀಲಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ದೊರೆತ ಕಳ್ಳಭಟ್ಟಿ ಸಾರಾಯಿ ಮತ್ತು ಬೆಲ್ಲದ ಕೊಳೆಯನ್ನು ಅಳತೆ ಮಾಪನದಿಂದ ಅಳತೆ ಮಾಡಿರುವುದಿಲ್ಲ. 3 ಕೊಡಪಾನಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. 3 ಕೊಡಪಾನಗಳಲ್ಲಿ ಪ್ರತ್ಯೇಕವಾಗಿ ಎಷ್ಟು ಪ್ರಮಾಣದ ಬೆಲ್ಲದ ಕೊಳೆ ಇತ್ತು ಎಂದು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ.

6. ಮಾದರಿಗಾಗಿ ಬೆಲ್ಲದ ಕೊಳೆ ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಶೇಖರಿಸಿಟ್ಟ ಬಾಟಲಿಗಳು ನಮ್ಮ ಇಲಾಖಾ ವಾಹನದಲ್ಲಿಯೇ ಇದ್ದವು.

ಆ ವಿಷಯವನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಬಾಟಲಿಯ ಅಳತೆಯಷ್ಟು ಮಾದರಿಗಳನ್ನು ತೆಗೆದಿರುತ್ತೇವೆ, ಅಳತೆ ಮಾಪನದಿಂದ ಅಳತೆ ಮಾಡಿರುವುದಿಲ್ಲ. ಯಾವ್ಯಾವ ಕೊಡಪಾನಗಳಿಂದ ಎಷ್ಟು ಬೆಲ್ಲದ ಕೊಳೆ ಶೇಖರಿಸಲಾಯಿತು ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಕೊಡಪಾನಗಳ ಬಣ್ಣಗಳನ್ನು ಸ್ವ ಪಿರ್ಯಾದಲ್ಲಿ ತಿಳಿಸಿರುವುದಿಲ್ಲ. ಪಂಚನಾಮೆಯ ಕಾಲಕ್ಕೆ ಯಾರ್ಯಾರು ಯಾವ್ಯಾವ ಕ್ರಮವನ್ನು ಅನುಸರಿಸಿದರು ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ವರದಿಯನ್ನು ಬರೆದ ಸಮಯದ ನಮೂದನೆ ಇರುವುದಿಲ್ಲ. ಪ್ಲಾಸ್ಟಿಕ್ ಕ್ಯಾನು ಮತ್ತು ಕೊಡಪಾನಗಳು ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ.

7. ಛಾಯಾಚಿತ್ರಗಳಲ್ಲಿ ಪ್ಲಾಸ್ಟಿಕ್ ಕ್ಯಾನು ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಿಂದೆ ಇರುತ್ತದೆ ಎಂದು ನುಡಿಯುತ್ತಾರೆ. ಛಾಯಾಚಿತ್ರಗಳನ್ನು, ವೀಡಿಯೋಗಳನ್ನು ಪೆನ್ ಡ್ರೈವ್ ಗೆ ವರ್ಗಾವಣೆ ಮಾಡುವ ಪರಿಣಿತಿಯ ಪ್ರಮಾಣ ಪತ್ರ ನನ್ನ ಬಳಿ ಇರುವುದಿಲ್ಲ, ಆದರೆ ಪರಿಣಿತಿ ಇರುತ್ತದೆ. ಪ್ಲಾಸ್ಟಿಕ್ ಚೀಲಗಳ ವಿವರವನ್ನು ಸ್ವತ್ತಿನ ಪಟ್ಟಿಯಲ್ಲಿ ಬರೆದಿರುವುದಿಲ್ಲ. ಉಳಿದ ಮದ್ಯದ ಮಾಲುಗಳನ್ನು ಇಲಾಖಾ ಮೇಲಾಧಿಕಾರಿಗಳ ವಶಕ್ಕೆ ನೀಡಿರುತ್ತೇನೆ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿಗೆ ಹೋಗಿಲ್ಲ ಮತ್ತು ಏನನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಪ್ರಶಂಸೆಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.